ಕತ್ತಿನ ಪಟ್ಟಿಗೆ ಕೈ ಹಾಕಿ ದರದರ ಎಳೆದರು.

ನೆಲದ ಮೇಲೆ ಸರಿಯಾಗಿ ಕಾಲೂರುವುದಕ್ಕೆ ಮೊದಲೇ ಒಬ್ಬಾತ ರೋಹಿತ್ ಸೊಂಟಕ್ಕೆ ಬಲವಾಗಿ ಒದ್ದ. ಅನಿರೀಕ್ಷಿತಕ್ಕೆ ರೋಹಿತ್ ತತ್ತರಿಸಿ ಬಿದ್ದ. ಎರಡೂ ಮೊಳಕೈ, ಅಂಗೈಗೆ ತರಚಿ ಗಾಯವಾಯಿತು. ಮೂಗು ಒಡೆದು ರಕ್ತ ಬಳಬಳ ಸೋರಿತು. ರೋಹಿತ್‌ನ ಎರಡೂ ಕೈಯನ್ನು ಬೆನ್ನ ಹಿಂದಕ್ಕೆ ಬಿಡಿಸಿಕೊಳ್ಳಲು ಆಗದಂತೆ ಇನ್ನೊಬ್ಬ ಕಟ್ಟಿದ. ಮತ್ತೊಬ್ಬ ರೋಹಿತ್‌ನ ಜೇಬು ಜಾಲಾಡಿದ. ಮೊಬೈಲ್ ಪರ್ಸ್ ತೆಗೆದುಕೊಂಡ ಬಳಿಕ ದರದರ ಎಳೆದು ಜೀಪಿನಲ್ಲಿ ಕುಳ್ಳಿರಿಸಿದರು. ಅದುವರೆಗೂ ತಮಾಷೆ ನೋಡುವವನಂತೆ ನಿಂತಿದ್ದ ಬಸ್ ಚಾಲಕ ತನ್ನ ಕೆಲಸ ಆಯಿತು ಎಂಬಂತೆ ಬಸ್ ಸ್ಟಾರ್ಟ್ ಮಾಡಿ ಕತ್ತಲನ್ನು ಸೀಳುತ್ತ ಸಾಗಿದ. ಉಕ್ಕುಕ್ಕಿ ಬರುತ್ತಿದ್ದ ದುಃಖದಿಂದ ಮಂಜುಗಣ್ಣಿನಲ್ಲಿ ರೋಹಿತ್, ಇದೇ ಕೊನೆಯ ಬಾರಿ ನೋಡುವುದೇನೋ ಎಂಬಂತೆ ಬಸ್ ಸಾಗಿದತ್ತ ತದೇಕ ಚಿತ್ತದಲ್ಲಿ ನೋಡಿದ.

ಏನಾಗುತ್ತಿದೆ ಎನ್ನುವುದು ಗೊತ್ತಾಗದ ಕ್ಷಿಪ್ರಗತಿಯ ಬೆಳವಣಿಗೆಗಳಿಂದ ಕಂಗಾಲಾದ ರೋಹಿತ್, 'ಯಾಕೆ ಹೀಗೆ ಮಾಡುತ್ತಿದ್ದೀರಿ, ನಾನೇನು ತಪ್ಪು ಮಾಡಿದ್ದೇನೆ' ಎಂದು ತನಗೆ ಬರುವ ಹರಕು ಮುರುಕು ಹಿಂದಿಯಲ್ಲಿ ಕೇಳಿದ. ಇವನು ಕೇಳಿದ್ದು ತಮ್ಮನ್ನಲ್ಲ ಎಂಬಂತೆ ಅವರೆಲ್ಲ ಅವರವರ ಪಾಡಿಗೆ ಇದ್ದರು. ಹೊರಗಿನದು ಏನೂ ಕಾಣಿಸದಂತೆ ಆದರೆ ಉಸಿರಾಟಕ್ಕೆ ತೊಂದರೆ ಮಾಡದ ವಸ್ತ್ರದಿಂದ ರೋಹಿತ್‌ನ ಮುಖವನ್ನು ಮುಚ್ಚಿದರು. ಅಮಾವಾಸ್ಯೆ ಪೂರ್ವದ ಕತ್ತಲು ಇನ್ನಷ್ಟು ಕಪ್ಪಾಯಿತು. ಇವರೊಂದಿಗೆ ಗುದ್ದಾಟ ಅರ್ಥಹೀನ ಎನಿಸಿತು ರೋಹಿತ್‌ಗೆ. ವಾಹನ ಚಲಿಸತೊಡಗಿತು. ಯಾಕೆ ಏನು ಎನ್ನುವುದೊಂದೂ ಅರ್ಥವಾಗದ ಅವನ ಬಾಯಲ್ಲಿ 'ಅಯ್ಯೋ ದೇವರೇ' ಎಂಬ ಆರ್ತನಾದ ಬಂತು. ಕಣ್ಣಲ್ಲಿ ದಳದಳ ನೀರುಕ್ಕಿ ಕೆನ್ನೆಗಳೆರನ್ನೂ ತೊಯ್ಯಿಸಿತು.

ವಾಹನ ಚಲಿಸುತ್ತಿರುವುದು ಮಾತ್ರ ಗೊತ್ತಾಗುತ್ತಿತ್ತು. ಜೀಪು ಚಲಿಸುವ ಮೊದಲು ಎರಡು ಮೂರು ಬಾರಿ ನಿಂತಲ್ಲೇ ಸುತ್ತು ಹಾಕಿದ್ದರಿಂದ ಎತ್ತ ಚಲಿಸುತ್ತಿದೆ ಎನ್ನುವುದು ಗೊತ್ತಾಗದಾಗಿತ್ತು. ಹಿಂದಕ್ಕೆ ತಾಳಗುಪ್ಪ ಶಿರಸಿ ಕಡೆಗೇ ಹೊರಟಿದೆಯೊ, ಜೋಗ ಕಾರ್ಗಲ್‌ನತ್ತ ಇಲ್ಲವೇ ಸಾಗರ, ಶಿವಮೊಗ್ಗದತ್ತ ಹೋಗುತ್ತಿದೆಯೊ ನೋವಿನಲ್ಲಿ ನರಳುತ್ತ ಯೋಚಿಸಿದ.



ಊಹೂಂ, ಗೊತ್ತಾಗಲಿಲ್ಲ. ಜೀಪಿನಲ್ಲಿದ್ದ ಯಾರೂ ಮಾತಾಡುತ್ತಿರಲಿಲ್ಲ. ಮೌನಕ್ಕೆ ಈ ಬಗೆಯ ಕ್ರೂರ ಮುಖವೂ ಇರಬಹುದೆ ಎಂದು ರೋಹಿತ್ ಕೇಳಿಕೊಂಡ. ನೆಲಕ್ಕೆ ಜಜ್ಜಿ ಒಡೆದ ಮುಸುಡಿಯಿಂದ ರಕ್ತ ಜಿನುಗುತ್ತಿತ್ತು. ಕೈಗಳನ್ನು ಕಟ್ಟಿ ಹಾಕಿದ್ದರಿಂದ ಒರೆಸಿಕೊಳ್ಳಲಾಗದೆ ಅಂಗಿ ರಕ್ತಮಯವಾಗಿದ್ದು ಗೊತ್ತಾಗುತ್ತಿತ್ತು. ದಿನದ ಘಟನಾವಳಿ ಒಂದೊಂದಾಗಿ ಮುಚ್ಚಿದ ಕಣ್ಣಿನ ಪರದೆಯ ಮೇಲೆ ಬರತೊಡಗಿತು. ದಾಂಡೇಲಿ ಬಸ್ ಏರುವುದಕ್ಕೆ ಮುನ್ನ ರೀಮಾಗೆ ಫೋನ್ ಮಾಡಿ, ಮರುದಿನ ಬೆಳಗ್ಗೆ ಐದೂವರೆ ಆರಕ್ಕೆಲ್ಲ ಮನೆ ಸೇರುವ ಮಾತಾಡಿದ್ದ. 'ಶಿವಮೊಗ್ಗ ಪಾರ್ಟಿಯಲ್ಲಿ ಸ್ವಲ್ಪ ಕಂಟ್ರೋಲ್ ಇರಲಿ' ಎಂದು ಆಕೆ ಹಳೆರಾಗ ಹಾಡಿದ್ದಲ್ಲದೆ, 'ರಾತ್ರಿ ಎಷ್ಟು ಹೊತ್ತಾದರೂ ಸೈ ಬಸ್ ಹೊರಟಾಕ್ಷಣ ಫೋನ್ ಮಾಡು, ಮರೆಯಬೇಡ' ಎಂದು ತಾಕೀತೂ ಮಾಡಿದ್ದಳು. ಚಂದ್ರಹಾಸ ಫೋನ್